

## ಭಾರತಕ್ಕೆ ಮತ್ತೊಬ್ಬ ವೀರೇಂದ್ರ ಸೆಹ್ವಾಗ್

# ಹೊಸ ಮಿಂಚು ಮಯಂಕ್

**ಮಯಂಕ್ ಹಾಗೂ ಕೆ.ಎಲ್. ರಾಹುಲ್ ಸಮಕಾಲೀನರು. 19 ವರ್ಷದೊಳಗಿನವರ ವಿಶ್ವಕಪ್‌ನಲ್ಲಿ ಒಟ್ಟಿಗೆ ಆಡಿದವರು. ಮಯಂಕ್‌ಗಿಂತ ಮೊದಲೇ ರಾಷ್ಟ್ರೀಯ ತಂಡದಲ್ಲಿ ಸ್ಥಾನ ಗಿಟ್ಟಿಸಿದ ರಾಹುಲ್, ಸದ್ಯ ಟೆಸ್ಟ್ ಬಳಗದಿಂದ ಹೊರಬಿದ್ದಿದ್ದಾರೆ. ಟೆಸ್ಟ್ ತಂಡದಲ್ಲಿ ಸ್ಥಾನ ಪಡೆದಿರುವ ಮಯಂಕ್, ತಿಂಗಳ ಅಂತರದಲ್ಲಿ ಎರಡು ದ್ವಿಶತಕ ಬಾರಿಸಿ ಸ್ಥಾನ ಗಟ್ಟಿ ಮಾಡಿಕೊಳ್ಳುವತ್ತ ಹೆಜ್ಜೆ ಇಟ್ಟಿದ್ದಾರೆ.**

**■ ಕೆ. ಓಂಕಾರ ಮೂರ್ತಿ**

ಕ್ರಿಕೆಟ್ ಕ್ರೇಜ್ ಭಾರತದಲ್ಲಿ ಹೇಗಿದೆಯೆಂದರೆ, ಲಕ್ಷಾಂತರ ಮಕ್ಕಳು ವಿವಿಧ ಹಂತಗಳಲ್ಲಿ ಕ್ರಿಕೆಟ್ ಆಡುತ್ತಿದ್ದಾರೆ. ಅಸಂಖ್ಯಾತ ಕ್ರಿಕೆಟ್ ಪ್ರೇಮಿಗಳಿದ್ದಾರೆ. ಕ್ರಿಕೆಟ್ ಬ್ಯಾಟ್ ಅಥವಾ ಚೆಂಡು ಹಿಡಿಯುವ ಪ್ರತಿಯೊಬ್ಬರ ಆಸೆ ಭಾರತ ತಂಡದಲ್ಲಿ ಆಡಬೇಕು ಎಂಬುದು. ಅವರಲ್ಲಿ ಎಷ್ಟು ಮಂದಿ ಆಸೆ ಪೂರೈಸಿಕೊಳ್ಳುತ್ತಾರೋ? ಎಷ್ಟು ಮಂದಿಯ ಬದುಕು ಯಾವ ಹಾದಿ ಹಿಡಿಯುತ್ತದೆಯೋ ಗೊತ್ತಿಲ್ಲ. ಆದರೆ, ಕನಸು ನನಸಾದ ವ್ಯಕ್ತಿಯ ನಸೀಬು ಮಾತ್ರ ಬದಲಾಗುತ್ತದೆ.

ಅಂಥವರಲ್ಲಿ 10 ವರ್ಷಗಳಿಂದ ಹತ್ತಿರದಿಂದಲೇ ಗಮನಿಸಿಕೊಂಡು ಬಂದಿರುವ ಕನ್ನಡ ನಾಡಿನವರೇ ಆದ ಮಯಂಕ್ ಅಗರವಾಲ್ ಹಾಗೂ ಕೆ.ಎಲ್. ರಾಹುಲ್ ಪ್ರಮುಖರು. ಕ್ರಿಕೆಟ್ ಎಂಬ ಆಸೆ, ಕನಸು, ಖುಷಿ, ವಿಶ್ವಾಸ, ಇನ್ನೇನೋ ತುಂಬಿರುವ ಮೂಟೆಯನ್ನು ಬೆನ್ನಿಗೆ ಕಟ್ಟಿಕೊಂಡಿರುವ ಇವರಿಬ್ಬರು ಈಗ ಸ್ಟಾರ್‌ಗಳು.

ನಾಲ್ಕು ವರ್ಷಗಳ ಹಿಂದಿನ ಮಾತು. ಮಯಂಕ್ ಎಂಬ ಪ್ರತಿಭೆ ಮೈಸೂರಿನ ಗಂಗೋತ್ರಿ ಗ್ಲೇಡ್ಸ್ ಕ್ರೀಡಾಂಗಣದಲ್ಲಿ ಮಾತಿಗೆ ಸಿಕ್ಕಿತ್ತು. ಒಡಿಶಾ ವಿರುದ್ಧದ ರಣಜಿ ಪಂದ್ಯದಲ್ಲಿ 78 ಬಾರಿಸಿದ್ದ ಅವರು ರಾಷ್ಟ್ರೀಯ ತಂಡದಲ್ಲಿ ಆಡುವ ಬಗ್ಗೆ ತಮ್ಮ ಕನಸು ಬಿಚ್ಚಿಟ್ಟಿದ್ದರು. ಆ ಕನಸಿನೊಂದಿಗೆ ಸಾಗಿ ಬರುತ್ತಿದ್ದ ಅವರು ಹಲವು ಬಾರಿ ಅಸಮಾಧಾನ ವ್ಯಕ್ತಪಡಿಸಿದ್ದುಂಟು. ಏಕೆಂದರೆ ದೇಸಿ ಕ್ರಿಕೆಟ್‌ನಲ್ಲಿ ದೊಡ್ಡ ಮೊತ್ತ ಗಳಿಸಿದ್ದರೂ ರಾಷ್ಟ್ರೀಯ ತಂಡದಲ್ಲಿ ಸ್ಥಾನ ಸಿಗುತ್ತಿಲ್ಲವಲ್ಲ ಎಂಬ ಬೇಸರ ಅವರಲ್ಲಿತ್ತು. ಅಷ್ಟರಲ್ಲಿ ಅವರ ಜೊತೆಗೆ ಕ್ರಿಕೆಟ್ ಆಡಲು ಶುರು ಮಾಡಿದ್ದ ರಾಹುಲ್ ಟೀಮ್ ಇಂಡಿಯಾ ಬಸ್ಸು ಹತ್ತಿದ್ದರು. ನಸೀಬು ಬದಲಾಯಿಸಿಕೊಂಡಿದ್ದರು.

ಒಂಬತ್ತು ವರ್ಷಗಳ ಹಿಂದಕ್ಕೆ ಹೋಗೋಣ. ಅಂದು ಸಂಜೆ ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದ ನೆಟ್ಸ್‌ನಲ್ಲಿ ಮಯಂಕ್ ಬೆವರು ಬಸಿಯುತ್ತಿದ್ದರು. ಅವರ ಜೊತೆಗೆ ಕೆ.ಎಲ್. ರಾಹುಲ್ ಕೂಡ ಇದ್ದರು. 19 ವರ್ಷದೊಳಗಿನವರ ವಿಶ್ವಕಪ್‌ಗೆ ಭಾರತ